# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಎಸ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 107 |
| ಉತ್ತರಿಸಬೇಕಾದ ದಿನಾಂಕ | 05.07.2023 |
| ಉತ್ತರಿಸಬೇಕಾದ ಸಚಿವರು | ಮಾನ್ಯ ವಸತಿ, ವಕ್ಫ್, ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ವಸತಿ ಇಲಾಖೆಯ ಅಡಿಯಲ್ಲಿ ಬರುವ ಒಟ್ಟು ನಿಗಮಗಳೆಷ್ಟು; ಈ ನಿಗಮಗಳಲ್ಲಿ ವರ್ಷಕ್ಕೆ ಸರಾಸರಿ ಎಷ್ಟು ಮನೆಗಳನ್ನು ಹಂಚಿಕೆ ಮಾಡಲಾಗುತ್ತಿದೆ; ಮನೆ ಪಡೆಯಲು ಇರುವ ಮಾನದಂಡಗಳೇನು;(ವಿವರ ನೀಡುವುದು) | ವಸತಿ ಇಲಾಖೆಯ ಅಡಿಯಲ್ಲಿ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ ಮತ್ತು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಕಾರ್ಯನಿರ್ವಹಿಸುತ್ತಿದೆ. ಈ ನಿಗಮ, ಮಂಡಳಿಯಲ್ಲಿ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಅನುದಾನವನ್ನು ಸಂಯೋಜಿಸಿಕೊಂಡು ರಾಜ್ಯ ಸರ್ಕಾರದ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ಸರ್ಕಾರದಿಂದ ಪ್ರತಿ ವರ್ಷ ಗುರಿ ಹಂಚಿಕೆಯಾಗಿರುವುದಿಲ್ಲ. 2020-21ರಿಂದ 2022-23 ರವರೆಗೆ ಸರ್ಕಾರವು ವಿವಿಧ ವಸತಿ ಯೋಜನೆಗಳಡಿ ಒಟ್ಟು 6,86,754 ಮನೆಗಳ ಗುರಿಯನ್ನು ಹಂಚಿಕೆ ಮಾಡಲಾಗಿರುತ್ತದೆ.<br><br>ಪ್ರತಿ ವರ್ಷ ಆಯವ್ಯಯದಲ್ಲಿ ನಿಗಧಿಪಡಿಸುವ ಅನುದಾನಕ್ಕೆ ಅನುಗುಣವಾಗಿ ವಿವಿಧ ವಸತಿ ಯೋಜನೆಗಳಡಿ ಗ್ರಾಮ ಪಂಚಾಯತಿವಾರು/ಸ್ಥಳೀಯ ಸಂಸ್ಥೆಗಳವಾರು ಮನೆಗಳ ಗುರಿ ನಿಗಧಿಪಡಿಸಿ ಗ್ರಾಮಸಭೆ/ಆಶ್ರಯ ಸಮಿತಿಗಳ ಮೂಲಕ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ ಹಂತ ಹಂತವಾಗಿ ವಸತಿ ಸೌಕರ್ಯವನ್ನು ಕಲ್ಪಿಸಲಾಗುತ್ತಿದೆ.<br><br>ವಸತಿ ಇಲಾಖೆಯ ವಿವಿಧ ಗ್ರಾಮೀಣ ಯೋಜನೆಗಳಡಿ ಮನೆಗಳನ್ನು ಪಡೆಯಲು ನಿಗಧಿಪಡಿಸಿರುವ ಮಾನದಂಡಗಳು ಈ ಕೆಳಕಂಡತಿವೆ.<br><br>• ಅರ್ಜಿದಾರರು ಕಡ್ಡಾಯವಾಗಿ ಮಹಿಳೆಯಾಗಿರಬೇಕು(ವಿವಾಹಿತ ಅಥವಾ ಏಕ ಮಹಿಳಾ ಒಡೆತನದ ಗೃಹಿಣಿ) ಮಾಜಿ ಯೋಧರು, ವಿಧುರರು, ಅಂಗವಿಕಲರು ಮತ್ತು ಹಿರಿಯ ನಾಗರೀಕರಾಗಿದ್ದಲ್ಲಿ ಪುರುಷರು ಸಹಾ ಅರ್ಹರಾಗಿರುತ್ತಾರೆ.<br>• ಅರ್ಜಿದಾರರ ಕುಟುಂಬವು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದು, ವಾರ್ಷಿಕ ಆದಾಯವು ಗ್ರಾಮೀಣ ಪ್ರದೇಶದಲ್ಲಿ ರೂ.1,20,000/- ಹಾಗೂ ನಗರ ಪ್ರದೇಶದಲ್ಲಿ ರೂ.2,00,000/-ಕ್ಕಿಂತ ಕಡಿಮೆ ಇರಬೇಕು. |

| | | |
|---|---|---|
| | | • ಅರ್ಜಿದಾರರ ಕುಟುಂಬವು ವಸತಿ ರಹಿತರಾಗಿದ್ದು, ಅರ್ಜಿದಾರರು ಅಥವಾ ಕುಟುಂಬದ ಯಾವುದೇ ಸದ್ಯಸರ ಹೆಸರಿನಲ್ಲಿ ಕರ್ನಾಟಕದ ಯಾವುದೇ ಭಾಗದಲ್ಲಿ ಸ್ವಂತ ಮನೆಯನ್ನು ಹೊಂದಿರಬಾರದು. ಶಿಥಿಲಗೊಂಡ ಮನೆ ಅಥವಾ ಗುಡಿಸಲಿನಲ್ಲಿ ವಾಸಿಸುತ್ತಿರುವವರು ಅರ್ಹರಾಗಿರುತ್ತಾರೆ.<br>• ಅರ್ಜಿದಾರರು ಸ್ವಂತ ನಿವೇಶನ ಹೊಂದಿದ್ದು, ನಿವೇಶನಕ್ಕೆ ಸಂಬಂಧಿಸಿದಂತೆ ಖಾತೆ ಹೊಂದಿರಬೇಕು (ಪಾರಂಪರಿಕ ಅರಣ್ಯ ಹಕ್ಕುಗಳ ಕಾಯ್ದೆಯನ್ವಯ ಜಿಲ್ಲಾ ಸಮಿತಿಯಿಂದ ನೀಡಲಾದ ಹಕ್ಕುಪತ್ರ ಪಡೆದಿದ್ದಲ್ಲಿ ವಸತಿ ಸೌಕರ್ಯ ಪಡೆಯಲು ಪರಿಗಣಿಸಬಹುದಾಗಿದೆ.)<br>• ಬೇರೆ ಯಾವುದೇ ಯೋಜನೆ/ಇಲಾಖೆಯಿಂದ ಈಗಾಗಲೇ ವಸತಿ ಸೌಲಭ್ಯ ಪಡೆದಿರಬಾರದು.<br>• ಪ್ರಧಾನ ಮಂತ್ರಿ ಆವಾಸ್ ಯೋಜನೆ(ಗ್ರಾ)ಯಡಿ ವಸತಿ ಸೌಲಭ್ಯ ಪಡೆಯಲು ಕೇಂದ್ರ ಸರ್ಕಾರದಿಂದ ನೀಡಲಾದ ಸಾಮಾಜಿಕ ಆರ್ಥಿಕ ಮತ್ತು ಜಾತಿ ಜನಗಣತಿ 2011ರ ಪಟ್ಟಿಯಲ್ಲಿ ಹೆಸರು ಸೇರಿರಬೇಕು.<br>• ಡಾ\|\| ಬಿ.ಆರ್.ಅಂಬೇಡ್ಕರ್ ಆವಾಸ್ ಯೋಜನೆಯಡಿ ವಸತಿ ಸೌಲಭ್ಯ ಪಡೆಯಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟವರ್ಗಕ್ಕೆ ಸೇರಿದವರಾಗಿರಬೇಕು.<br><br>ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) ಯಡಿ ಫಲಾನುಭವಿಗಳನ್ನು ಗುರುತಿಸಲು/ ಆಯ್ಕೆ ಮಾಡುವ ಮಾನದಂಡ ಈ ಕೆಳಗಿನಂತಿವೆ.<br><br>• ಫಲಾನುಭವಿಯು ಬೇಡಿಕೆ ಸಮೀಕ್ಷೆಯಲ್ಲಿರಬೇಕು.<br>• ದೇಶದಾದ್ಯಂತ ಅವನ / ಅವಳ ಹೆಸರಿನಲ್ಲಿ ಯಾವುದೇ ಮನೆ ಇರಬಾರದು.<br>• ವಾರ್ಷಿಕ ಆದಾಯ 3 ಲಕ್ಷಕ್ಕಿಂತ ಕಡಿಮೆ ಇರಬೇಕು.<br>• ಇತರೇ ವಸತಿ ಯೋಜನೆಗಳಲ್ಲಿ ಈಗಾಗಲೇ ಸಹಾಯಧನ ಪಡೆದಿರಬಾರದು.<br>• ಫಲಾನುಭವಿಯು ಸ್ವಂತ ನಿವೇಶನ ಹೊಂದಿರಬೇಕು. |
| ಆ) | ಮನೆ ಹಂಚಿಕೆಯಲ್ಲಿ ಅವ್ಯವಹಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅಂತಹ ಪ್ರಕರಣಗಳೆಷ್ಟು, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸರ್ಕಾರ ಕ್ರಮ ಕೈಗೊಂಡಿದೆಯೇ; (ವಿವರ ನೀಡುವುದು) | ವಸತಿ ಯೋಜನೆಗಳಡಿಯ ಫಲಾನುಭವಿಗಳನ್ನು ಗ್ರಾಮೀಣ ಪ್ರದೇಶದಲ್ಲಿ ಗ್ರಾಮಸಭೆ ಮತ್ತು ನಗರ ಪ್ರದೇಶದಲ್ಲಿ ಸಂಬಂಧಪಟ್ಟ ವಿಧಾನ ಸಭಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯ ನಗರ ಆಶ್ರಯ ಸಮಿತಿಯು ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವ ಪ್ರಾಧಿಕಾರಿಯಾಗಿರುತ್ತಾರೆ.<br><br>ಮನೆ ಹಂಚಿಕೆಗೆ ಸಂಬಂಧಪಟ್ಟಂತೆ ಈ ಕೆಳಕಂಡ 03 ಜಿಲ್ಲೆಗಳಲ್ಲಿ ಅವ್ಯವಹಾರ ನಡೆದಿರುವುದಾಗಿ 2019ರಿಂದ ಈ ಕೆಳಕಂಡಂತೆ ದೂರುಗಳು ಸ್ವೀಕೃತವಾಗಿರುತ್ತವೆ.<br><br>**ಚಿತ್ರದುರ್ಗ ಜಿಲ್ಲೆ:**<br>A) ಹಿರಿಯೂರು ತಾಲ್ಲೂಕು, ಕಣಜನಹಳ್ಳಿ ಗ್ರಾಮ ಪಂಚಾಯಿತಿ<br><br>B) ಹಿರಿಯೂರು ತಾಲ್ಲೂಕು, ಅಬ್ಬಿನಹೊಳೆ ಗ್ರಾಮ |

| | | |
|---|---|---|
| | | ಪಂಚಾಯಿತಿ<br>**ಕಲಬುರ್ಗಿ ಜಿಲ್ಲೆ:**<br>A) ಕಲಬುರ್ಗಿ ತಾಲ್ಲೂಕು, ಜೀವಣಗಿ ಗ್ರಾಮ ಪಂಚಾಯಿತಿ<br>B) ಕಲಬುರ್ಗಿ ತಾಲ್ಲೂಕು, ಮರಗುತ್ತಿ ಗ್ರಾಮ ಪಂಚಾಯಿತಿ<br>**ಬೀದರ್ ಜಿಲ್ಲೆ:**<br>A) ಭಾಲ್ಕಿ ತಾಲ್ಲೂಕಿನ 41 ಗ್ರಾಮ ಪಂಚಾಯಿತಿಗಳು<br>B) ಭಾಲ್ಕಿ ಪುರಸಭೆ<br><br>ಮೇಲ್ಕಂಡ ಪ್ರಕರಣಗಳಲ್ಲಿ ತಪ್ಪಿತಸ್ಥ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಮುಖ್ಯಾಧಿಕಾರಿಗಳನ್ನು ಅಮಾನತ್ತುಗೊಳಿಸಲಾಗಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ: ವಇ 154 ಹೆಚ್.ಎ.ಎಂ 2019, ದಿನಾಂಕ: 06.11.2019 ರಲ್ಲಿ ನಿಯಮ/ಮಾರ್ಗಸೂಚಿ ಉಲ್ಲಂಘನೆ ಮತ್ತು ಅನುದಾನ ದುರುಪಯೋಗಕ್ಕೆ ಕಾರಣರಾದ ಫಲಾನುಭವಿಗಳನ್ನು ಒಳಗೊಂಡಂತೆ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಸೂಕ್ತ ಕ್ರಮವಹಿಸಲು ಹಾಗೂ ಫಲಾನುಭವಿಗಳಿಗೆ ಈಗಾಗಲೇ ಬಿಡುಗಡೆಯಾಗಿರುವ ಸಹಾಯಧನವನ್ನು "ಭೂಕಂದಾಯ ಬಾಕಿ " ಎಂದು ವಸೂಲಾತಿಗೆ ಕ್ರಮವಹಿಸಲು ತಿಳಿಸಲಾಗಿದೆ. ಅದರಂತೆ ಕ್ರಮವಹಿಸುವಂತೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ನಿರ್ದೇಶನ ನೀಡಿದ್ದು, ರಾಜೀವ್ ಗಾಂಧಿ ವಸತಿ ನಿಗಮದಿಂದ ಹಿಂಬಾಲಿಕಾ ಕ್ರಮವಹಿಸಲಾಗುತ್ತಿದೆ. |
| ಇ) | ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳ ಒಂದು ಲಕ್ಷ ಬಹುಮಹಡಿ ವಸತಿ ಯೋಜನೆಯಡಿ ಎಷ್ಟು ಮನೆಗಳು ಪೂರ್ಣಗೊಂಡಿವೆ; ಎಷ್ಟು ಮನೆಗಳನ್ನು ಹಂಚಿಕೆ ಮಾಡಲಾಗಿದೆ;(ವಿವರ ನೀಡುವುದು) | "ಒಂದು ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ" ಯಡಿ ಇಲ್ಲಿಯವರೆಗೆ 5,961 (ಜಿ+3 ಇಂದ ಎಸ್+14) ಬಹುಮಹಡಿ ಮನೆಗಳು ಪೂರ್ಣಗೊಂಡಿವೆ. ಪೂರ್ಣಗೊಂಡಿರುವ ಮನೆಗಳ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ.<br><br>ಅರ್ಹ ಅರ್ಜಿದಾರರು ತಮ್ಮ ಇಚ್ಛೆಯ ಫ್ಲಾಟ್/ ಮನೆಗಳನ್ನು ಆನ್‌ಲೈನ್ ಮೂಲಕ ಆಯ್ಕೆ ಮಾಡಿಕೊಂಡಿರುವ ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಿದೆ. |
| ಈ) | ಒಂದು ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆಯಲ್ಲಿ 1 ಬಿ.ಹೆಚ್.ಕೆ, 2 ಬಿ.ಹೆಚ್.ಕೆ. ಪ್ರತಿ ಘಟಕದ ಅಂದಾಜು ಮೊತ್ತ ಕಡಿಮೆ ಮಾಡುವ ಕುರಿತು ಸರ್ಕಾರದ ನಿಲುವೇನು? (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ವಇ 31 ಹೆಚ್‌ಎಫ್‌ಎ 2019 ಭಾಗ-1, ದಿನಾಂಕ : 16.01.2020 ರಲ್ಲಿ 1 BHK ಮನೆಯನ್ನು 10.60 ಲಕ್ಷಕ್ಕೆ ಮತ್ತು 2 BHK ಮನೆಯನ್ನು ರೂ 15.00 ಲಕ್ಷಕ್ಕೆ ನಿಗಧಿಪಡಿಸಲಾಗಿತ್ತು.<br><br>1 BHK ಮನೆಯ ಫಲಾನುಭವಿ ವಂತಿಗೆಯು ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡಕ್ಕೆ ರೂ 7.10 ಲಕ್ಷಗಳಾಗಿದ್ದು, ಇತರೆ ವರ್ಗದದವರಿಗೆ ರೂ 7.90 ಲಕ್ಷಗಳಾಗಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ : ವಇ 180 ಹೆಚ್‌ಎಫ್‌ಎ 2022 ಭಾಗ-1 ದಿನಾಂಕ : 01.12.2022ರಲ್ಲಿ 1 BHK ಮನೆಯ ಫಲಾನುಭವಿ ವಂತಿಗೆಯ ಪೈಕಿ ಪರಿಶಿಷ್ಟ ಜಾತಿ / ಪರಿಶಿಷ್ಟ |

| | | |
|---|---|---|
| | | ಪಂಗಡದವರಿಂದ ರೂ 6.00 ಲಕ್ಷಗಳನ್ನು ಹಾಗೂ ಇತರೆ ವರ್ಗದವರಿಂದ ರೂ 6.50 ಲಕ್ಷಗಳನ್ನು ಸಂಗ್ರಹಿಸಲು ತಿಳಿಸಲಾಗಿದ್ದು, ಉಳಿಕೆಯ ಫಲಾನುಭವಿ ವಂತಿಗೆಯನ್ನು ಪಾವತಿಸಲು 02 ವರ್ಷಗಳ ಕಾಲವಾಧಿಯನ್ನು ನೀಡಲಾಗಿದೆ.<br><br>ಅಂತೆಯೇ, ಸರ್ಕಾರದ ಆದೇಶ ಸಂಖ್ಯೆ: ವಇ 19 ಹೆಚ್.ಎಫ್.ಎ 2022 ದಿನಾಂಕ: 02.08.2022ರಲ್ಲಿ 2 BHK ಮನೆಯ ಘಟಕ ವೆಚ್ಚವನ್ನು ರೂ 15.00 ಲಕ್ಷಗಳಿಂದ ರೂ 14.00 ಲಕ್ಷಗಳಿಗೆ ಕಡಿಮೆ ಮಾಡಿ ನಿಗಧಿಪಡಿಸಲಾಗಿದೆ.<br><br>ಪ್ರಸ್ತುತ 1 BHK ಮನೆಯ ನಿರ್ಮಾಣಕ್ಕೆ ಗುತ್ತಿಗೆದಾರರು ಪರಿಷ್ಕೃತ GST ನ್ನು ಪಾವತಿಸಬೇಕಾಗಿದ್ದು, ಇದರ ಹೆಚ್ಚುವರಿ ಮೊತ್ತವನ್ನು ಬಿಡುಗಡೆ ಮಾಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.<br><br>ಸರ್ಕಾರವು ಪ.ಜಾ/ಪ.ಪಂ ಫಲಾನುಭವಿಗಳಿಗೆ ರೂ 3.50 ಲಕ್ಷಗಳು ಮತ್ತು ಇತರೆ ವರ್ಗದವರಿಗೆ ರೂ 2.70 ಲಕ್ಷಗಳ ಸಹಾಯಧನವನ್ನು ಒದಗಿಸುತ್ತಿದ್ದು, ಈ ಸಹಾಯಧನಕ್ಕಿಂತ ಹೆಚ್ಚಿನ ವೆಚ್ಚಗಳನ್ನು ಫಲಾನುಭವಿಗಳೇ ಭರಿಸಬೇಕಾಗಿರುವುದರಿಂದ ಪ್ರತಿ ಘಟಕದ ಅಂದಾಜು ವೆಚ್ಚವನ್ನು ಇನ್ನಷ್ಟು ಕಡಿಮೆ ಮಾಡಲು ಅವಕಾಶವಿರುವುದಿಲ್ಲ. |

ಸಂಖ್ಯೆ: ವಇ 88 ಹೆಚ್‌ಎಫ್‌ಎ 2023]

**(ಬಿ.ಝಡ್ ಜಮೀರ್ ಅಹಮದ್ ಖಾನ್)**
ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ
ಕಲ್ಯಾಣ ಸಚಿವರು

ಅನುಬಂಧ-1

"1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ"ಯಡಿ ಪೂರ್ಣಗೊಳಿಸಲಾದ ಮನೆಗಳ ವಿವರ

| ಕ್ರಮ ಸಂಖ್ಯೆ | ಗ್ರಾಮ | ಸರ್ವೆ. ನಂ. | ಮಾದರಿ | ಮನೆಗಳ ಸಂಖ್ಯೆ | |
|---|---|---|---|---|---|
| | | | | 1 BHK | 2 BHK |
| 1 | ಅಗ್ರಹಾರಪಾಳ್ಯ ಯಲಹಂಕ | 30 | ಜಿ+3 | 488 | 0 |
| 2 | ಸಾದೇನಹಳ್ಳಿ ಯಲಹಂಕ | 30 | ಜಿ+3 | 128 | 0 |
| 3 | ಜಿಲ್ಲಹಳ್ಳಿ ಯಲಹಂಕ | 53 | ಜಿ+3 | 251 | 0 |
| 4 | ನವರತ್ನ ಅಗ್ರಹಾರ ಬ್ಯಾಟರಾಯನಪುರ | 14 | ಎಸ್+7 | 140 | 0 |
| 5 | ಕೂಗೂರು ಆನೇಕಲ್ | 69 | ಜಿ+3 | 256 | 0 |
| 6 | ದೇವಗೆರೆ ಕೆಂಗೇರಿ ಯಶವಂತಪುರ | 67 | ಜಿ+3 | 140 | 0 |
| 7 | ಬಿದರಹಳ್ಳಿ ಮಹದೇವಪುರ | 193 | ಎಸ್+14 | 448 | 0 |
| 8 | ಕೆಂಚನಪುರ ತಾವರೆಕೆರೆ ಯಶವಂತಪುರ | 63 | ಎಸ್+14 | 225 | 0 |
| 9 | ದೊಡ್ಡನಾಗಮಂಗಲ ಬೆಂಗಳೂರು ದಕ್ಷಿಣ | 11 | ಜಿ+3 | 186 | 0 |
| 10 | ಚಿಕ್ಕಲ್ಲೂರು ರಾಂಪುರ ಮೈಸೂರು ರಸ್ತೆ ಯಶವಂತಪುರ | 1 | ಎಸ್+14 | 516 | 0 |
| 11 | ಚಿಕ್ಕನಹಳ್ಳಿ- ಕಾಮನಹಳ್ಳಿ ಆನೇಕಲ್ | 71 | ಎಸ್+13 | 530 | 0 |
| 12 | ನೆಲಗುಳಿ ಕನಕಪುರ ರಸ್ತೆ ಯಶವಂತಪುರ | 145 | ಎಸ್+14 | 904 | 0 |
| 13 | ದೇವಗೆರೆ ಕೆಂಗೇರಿ ಯಶವಂತಪುರ | 68 | ಎಸ್+14 | 312 | 0 |
| 14 | ಲಿಂಗಾಪುರ ಆನೇಕಲ್ | 112 | ಎಸ್+13 | 265 | 0 |
| 15 | ಕೆ.ನಾರಾಯಣಪುರ ಕೆ.ಆರ್.ಪುರಂ | 40 | ಎಸ್+9 | 0 | 160 |
| 16 | ತೋಟಗೆರೆ ಯಲಹಂಕ | 14 | ಜಿ+3 | 260 | 0 |
| 17 | ಕುಕ್ಕನಹಳ್ಳಿ ಯಲಹಂಕ | 78 | ಜಿ+3 | 512 | 0 |
| 18 | ಗೂಳಿಮಂಗಲ ಆನೇಕಲ್ | 67 | ಎಸ್+8 | 0 | 144 |
| 19 | ಜೆ. ಭಂಗಿಪುರ ಆನೇಕಲ್ | 29 | ಜಿ+3 | 96 | 0 |
| | ಒಟ್ಟು | | | 5961 | |

03/07/22

ಅನುಬಂಧ - 2

| ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ | | | | | | | | | | | |
|---|---|---|---|---|---|---|---|---|---|---|---|
| "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ" | | | | | | | | | | | |
| ದಿನಾಂಕ: **23.06.2023 16.10 hrs** | | | | | | | | | | | |
| ಒಟ್ಟಾರೆಯಾಗಿ ಆಯ್ಕೆಮಾಡಲಾಗಿರುವ ಫ್ಲಾಟ್‌ಗಳ ಸ್ಥಿತಿ | | | | | | | | | | | |
| ಕ್ಷೇತ್ರ | ಒಟ್ಟು ಸ್ಥಳಗಳಲ್ಲಿ ನಿರ್ಮಾಣ | ಒಟ್ಟು ಬ್ಲಾಕ್‌ಗಳ ಸಂಖ್ಯೆ | ಒಟ್ಟು ಫ್ಲಾಟ್‌ಗಳ ಸಂಖ್ಯೆ | ಒಟ್ಟು ಫ್ಲಾಟ್‌ಗಳ ಸಂಖ್ಯೆ ವಿಕಲಚೇತನರಿಗೆ | ಒಟ್ಟು ಫ್ಲಾಟ್‌ಗಳ ಸಂಖ್ಯೆ ಇತರರಿಗೆ | ಒಟ್ಟು ಬುಕ್ ಆಗಿರೋ ಫ್ಲಾಟ್‌ಗಳ ಸಂಖ್ಯೆ | ಒಟ್ಟು ಬುಕ್ ಆಗಿರೋ ಫ್ಲಾಟ್‌ಗಳ ಸಂಖ್ಯೆ ವಿಕಲಚೇತನರಿಗೆ | ಒಟ್ಟು ಬುಕ್ ಆಗಿರೋ ಫ್ಲಾಟ್‌ಗಳ ಸಂಖ್ಯೆ ಇತರರಿಗೆ | ಒಟ್ಟು ಲಭ್ಯವಿರುವ ಫ್ಲ್ಯಾಟ್‌ಗಳ ಸಂಖ್ಯೆ | ಒಟ್ಟು ಲಭ್ಯವಿರುವ ಫ್ಲ್ಯಾಟ್‌ಗಳ ಸಂಖ್ಯೆ ವಿಕಲಚೇತನರಿಗೆ | ಒಟ್ಟು ಲಭ್ಯವಿರುವ ಫ್ಲ್ಯಾಟ್‌ಗಳ ಸಂಖ್ಯೆ ಇತರರಿಗೆ |
| ಆನೇಕಲ್ | 5 | 16 | 4044 | 75 | 3969 | 808 | 17 | 791 | 3236 | 58 | 3178 |
| ಕೃಷ್ಣರಾಜಪುರಂ | 2 | 4 | 524 | 0 | 524 | 278 | 0 | 278 | 246 | 0 | 246 |
| ದಾಸರ ಹಳ್ಳಿ | 1 | 1 | 796 | 16 | 780 | 701 | 16 | 685 | 95 | 0 | 95 |
| ಬೆಂಗಳೂರು ದಕ್ಷಿಣ | 2 | 9 | 582 | 0 | 579 | 345 | 0 | 345 | 237 | 0 | 234 |
| ಬ್ಯಾಟರಾಯನಪುರ | 2 | 3 | 526 | 7 | 528 | 288 | 4 | 284 | 238 | 3 | 244 |
| ಮಹದೇವಪುರ | 1 | 9 | 3967 | 83 | 4116 | 1096 | 23 | 1073. | 2871 | 60 | 3043 |
| ಯಲಹಂಕ | 10 | 61 | 8048 | 156 | 9920 | 3503 | 51 | 3452 | 7660 | 105 | 7549 |
| ಯಶವಂತಪುರ | 9 | 28 | 5020 | 195 | 12182 | 2790 | 53 | 2737 | 2230 | 142 | 9445 |
| ಒಟ್ಟು | **32** | **131** | **23507** | **532** | **32598** | **9809** | **164** | **9645** | **16813** | **368** | **24034** |

M. Bhaskar
Executive Engineer
RGHCL, Bengaluru